# ಸ್ವಾಮಿ ವಿವೇಕಾನಂದರ ಆರ್ಥಿಕ ಚಿಂತನೆ

ಪ್ರೊಫೆಸರ್ (ಡಾ). ಡಿ.ಎಂ. ನಂಜುಂಡಪ್ಪ

**ಸ್ವಾಮಿ ವಿವೇಕಾನಂದರ ಸಾಮಾಜಿಕ ಆರ್ಥಿಕ ಚಿಂತನೆಗಳು ಜಾಗತಿಕ ಜ್ಞಾನರಾಶಿಗೆ ಒಂದು ಅಪೂರ್ವ ಕೊಡುಗೆಯಾಗಿವೆ. ಸ್ವಾಮೀಜಿಯವರ ಚಿಂತನೆಗಳನ್ನು ಸಮಕಾಲೀನರ ಚಿಂತನೆಯೊಂದಿಗೆ ಹೋಲಿಸುವ ಅಪೂರ್ವ ಪ್ರಯತ್ನವನ್ನು ಮಾಡಿರುವ ಪ್ರೊಫೆಸರ್ ಡಿ.ಎಂ. ನಂಜುಂಡಪ್ಪನವರು ಖ್ಯಾತ ಅರ್ಥಶಾಸ್ತ್ರಜ್ಞರೇ ಅಲ್ಲದೆ ಕರ್ನಾಟಕ ಮತ್ತು ಬೆಂಗಳೂರು ವಿಶ್ವವಿದ್ಯಾಲಯದ ಮಾಜಿ ಉಪಕುಲಪತಿಗಳೂ ಹಾಗೂ ಭಾರತ ಸರ್ಕಾರದ ಅನೇಕ ಆರ್ಥಿಕ ಯೋಜನೆಗಳಲ್ಲಿ ಪ್ರಧಾನವಾಗಿ ತೊಡಗಿಸಿಕೊಂಡವರೂ ಆಗಿದ್ದಾರೆ. ಸದ್ಯ ಅವರು ಪ್ರಾದೇಶಿಕ ಅಸಮತೋಲನ ನಿವಾರಣಾ ಉನ್ನತಾಧಿಕಾರದ ಸಮಿತಿಯ ಅಧ್ಯಕ್ಷರಾಗಿರುವರು.**

ಬ್ರಿಟನ್ನಿನ ವಿಶ್ವವಿಖ್ಯಾತ ಅರ್ಥಶಾಸ್ತ್ರಜ್ಞ ಪ್ರೊ. ಎ.ಸಿ. ಪಿಗು ರವರು ೧೯೨೦ರಲ್ಲಿ ಅರ್ಥಶಾಸ್ತ್ರದ ಬಗ್ಗೆ ಬರೆದ "ಮಾನವ ಕಲ್ಯಾಣದ ಅರ್ಥಶಾಸ್ತ್ರ"ವೆಂಬ ಪುಸ್ತಕ ವಿಶ್ವದಲ್ಲೆಲ್ಲಾ ಹೆಸರು ಮಾಡಿದ್ದು ಅರ್ಥಶಾಸ್ತ್ರಜ್ಞರಲ್ಲಿ ಮಾನವಕಲ್ಯಾಣದ ಬಗೆಗೆ ಹೆಚ್ಚು ಚಿಂತನೆ ಮೂಡುವುದಕ್ಕೆ ಕಾರಣವಾಗಿತ್ತು. ಒಂದು ಮಟ್ಟದಲ್ಲಿ ಅದನ್ನು ಅಭಿವೃದ್ಧಿಯ ಅರ್ಥಶಾಸ್ತ್ರ ಹಿಂದಕ್ಕೆ ತಳ್ಳಿಹಾಕಿತು. ಆಶ್ಚರ್ಯವೇನೆಂದರೆ, ಇತ್ತೀಚೆಗೆ ಮಾನವಕಲ್ಯಾಣದ ಬಗ್ಗೆ ಆರ್ಥಿಕ ಚಿಂತನೆ ಹೆಚ್ಚುತ್ತಿದ್ದು, ಮಾನವ ಸಂಪನ್ಮೂಲಗಳ ಅಭಿವೃದ್ಧಿ ಯಾವುದೇ ರಾಷ್ಟ್ರದ ಪ್ರಗತಿಗೆ ಹಾಗೂ ಅದರ ಬೆಳವಣಿಗೆಗೆ ಅತ್ಯಾವಶ್ಯಕ ಎಂದು ಪ್ರತಿಪಾದಿಸಿದ ಭಾರತೀಯ ವಿದೇಶಿ ನಿವಾಸಿ ಪ್ರೊ. ಅಮರ್ತ್ಯ ಸೇನ್ ಅವರಿಗೆ ಮಾನವಕಲ್ಯಾಣದ ಅರ್ಥಶಾಸ್ತ್ರಕ್ಕೆ ಅವರು ನೀಡಿದ ಕೊಡುಗೆಗಾಗಿ ನೊಬೆಲ್ ಪಾರಿತೋಷಕವನ್ನು ಕೊಟ್ಟು ಅಭಿನಂದಿಸಲಾಯಿತು. ಜನಸಾಮಾನ್ಯರ ಆರ್ಥಿಕ ಮತ್ತು ಸಾಮಾಜಿಕ ಉನ್ನತಿಯ ಕುರಿತಾದ ಸ್ವಾಮಿ ವಿವೇಕಾನಂದರ ಭಾವನೆಗಳನ್ನು ಈ ಹಿನ್ನೆಲೆಯಲ್ಲಿ ಪರಿಶೀಲಿಸಿದಾಗ ಅವರ ದೂರ ದೃಷ್ಟಿಯ ಅರಿವುಂಟಾಗುತ್ತದೆ. ಸ್ವಾಮಿಜಿಯವರ ಆರ್ಥಿಕ ಚಿಂತನೆಯನ್ನು ವಿವಿಧ ಆರ್ಥಿಕ ಸಿದ್ಧಾಂತಗಳ ಹಿನ್ನೆಲೆಯಲ್ಲಿ ನೋಡಿದಾಗ ಅವರದು ಒಂದು ಕ್ರಾಂತಿಕಾರಿ ಮಾನವಕಲ್ಯಾಣದ ಅರ್ಥಶಾಸ್ತ್ರವೆಂದು ಎನಿಸಿಕೊಳ್ಳಬಲ್ಲದು. ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಅನುಸರಿಸಬೇಕಾದ ಕಾರ್ಯತಂತ್ರಗಳು ಸ್ವರೂಪದಲ್ಲಿ ತಾಂತ್ರಿಕವಾಗಿ ಕಂಡರೂ ಮೂಲಭೂತವಾಗಿ ಈ ಪ್ರಕ್ರಿಯೆಯಲ್ಲಿ ಮಾನವ ಸಂಪನ್ಮೂಲಗಳ ಅಭಿವೃದ್ಧಿ ಅತ್ಯಂತ ಮಹತ್ವದ ಅಂಶವೆಂದು ಸಮರ್ಥವಾಗಿ ಪ್ರತಿಪಾದಿಸಿದ ಸ್ವಾಮೀಜಿಯವರ ಚಿಂತನೆಯಲ್ಲಿ ಅರ್ಥಶಾಸ್ತ್ರದ ವಿವಿಧ ಮುಖಗಳ ಸಮ್ಮಿಳನವನ್ನು ಕಾಣುತ್ತೇವೆ.

> ಸ್ವಾಮಿ ವಿವೇಕಾನಂದರು ಕೈಗಾರಿಕಾ ಮತ್ತು ಗ್ರಾಮೀಣ ಆರ್ಥಿಕ ಸಮಸ್ಯೆಗಳ ಆಳ ಪರಿಜ್ಞಾನವುಳ್ಳವರಾಗಿದ್ದರು.
>
> *—ರೋಮೈ ರೊಲಾ*

ಸ್ವಾಮೀಜಿಯವರು ಅರ್ಥಶಾಸ್ತ್ರದ ಆಳ ಅಧ್ಯಯನ ಮತ್ತು ಚಿಂತನೆ ನಡೆಸಿದ್ದರು. ಅವರು ಒಬ್ಬ ಸಂನ್ಯಾಸಿಯಾಗಿಯೂ ಈ ವಿಷಯದ ಮೇಲೆ ಎಷ್ಟೊಂದು ಪ್ರಭುತ್ವವನ್ನು ಸಾಧಿಸಿದ್ದರು ಎಂಬುದಕ್ಕೆ ಅವರು ವಿಶ್ವಧರ್ಮಸಮ್ಮೇಳನದಲ್ಲಿ ಮಾತನಾಡುವುದಕ್ಕೆ ಮುಂಚೆಯೇ **ಅಮೆರಿಕ ಸಮಾಜವಿಜ್ಞಾನ ಕೇಂದ್ರದ** ಆರ್ಥಿಕ ಸಭೆಯೊಂದರಲ್ಲಿ "ಭಾರತದಲ್ಲಿ ಬೆಳ್ಳಿಯ ಬಳಕೆ" ಎಂಬ ವಿಷಯವಾಗಿ ಮಾತನಾಡಿದ್ದರು ಎಂಬುದೇ ಸಾಕ್ಷಿಯಾಗಿದೆ.

## ಆಧುನಿಕತೆ ಮತ್ತು ಅಸಮಾನತೆಯ ಪಿಡುಗು

ಕೈಗಾರಿಕೆಗಳ ಸ್ಥಾಪನೆ, ಕೃಷಿಯ ಸುಧಾರಣೆ, ಶೈಕ್ಷಣಿಕ ಸೌಲಭ್ಯಗಳ ಅಭಿವೃದ್ಧಿ, ಗ್ರಾಮೀಣ ಅಭಿವೃದ್ಧಿ ಮುಂತಾದವುಗಳಿಗೆ ಸಂಬಂಧಿಸಿದಂತೆ ಹಲವು ರಾಷ್ಟ್ರೀಯ ಯೋಜನೆಗಳ ಮೂಲಕ ಭಾರತವನ್ನು ಆಧುನೀಕರಣಗೊಳಿಸಲು ಪ್ರಯತ್ನಿಸಲಾಗಿದೆ ಎಂಬುದು ಎಲ್ಲರೂ ಒಪ್ಪಿಕೊಳ್ಳುವ ಮಾತು. ಪ್ರಾದೇಶಿಕ ಮತ್ತು ನಗರ-ಗ್ರಾಮೀಣ ಅಸಮಾನತೆಗಳನ್ನು ತಗ್ಗಿಸಲು ಪ್ರಾದೇಶಿಕ ಯೋಜನೆಗಳನ್ನು ರಾಷ್ಟ್ರೀಯ ಯೋಜನೆಯೊಂದಿಗೆ ಮೇಳವಿಸುವ ಪ್ರಯತ್ನಗಳನ್ನೂ ಮಾಡಲಾಗಿದೆ. ಭಾರತ ಅತ್ಯದ್ಭುತ ಪ್ರಗತಿಯನ್ನು ಸಾಧಿಸಿದ್ದರೂ ಸಹ ದಾರಿದ್ರ್ಯ ಮತ್ತು ನಿರುದ್ಯೋಗದ ಸಮಸ್ಯೆಗಳು ಇನ್ನೂ ಕಾಡುತ್ತಿವೆ. ಪ್ರಾದೇಶಿಕ ಅಸಮಾನತೆಗಳು ಈ ಸಮಸ್ಯೆಗಳನ್ನು ಮತ್ತಷ್ಟು ಉಲ್ಬಣಗೊಳಿಸಿವೆ. ಸಮಾಜದ ಪರಿವರ್ತನೆಯ ಕಾರ್ಯದಲ್ಲಿ ಯೋಜನೆಯ ಪ್ರಮುಖ ಗುರಿಗಳಲ್ಲಿ ಒಂದಾದ ಜನತೆಯ ಮೌಲ್ಯಗಳು ಮತ್ತು ನಿಲುವುಗಳಲ್ಲಿ ಬದಲಾವಣೆಗಳನ್ನುಂಟುಮಾಡಬೇಕೆಂಬ ಗುರಿ ಯೋಜನೆ ತಯಾರಿಸುವವರಿಗೆ ಮರೀಚಿಕೆಯಾಗಿಯೇ ಉಳಿದಿದೆ. ಇತ್ತೀಚಿನ ಜಾಗತೀಕರಣ ಮತ್ತು ಉದಾರೀಕರಣಗಳಿಂದ ಒಂದು ಕಡೆ ಬೆಳವಣಿಗೆ ದರ ಹೆಚ್ಚಿದಾಗ್ಯೂ, ಅಸಮಾನತೆ ಇನ್ನೂ ಹೆಚ್ಚಾಗುತ್ತಿದೆ. ವಿಶ್ವದ ಒಟ್ಟು ಆದಾಯದಲ್ಲಿ ಮೇಲಿನ ಶೇ. ೨೦ರಷ್ಟು ಜನರು ಶೇ.೮೬ಕ್ಕಿಂತ ಹೆಚ್ಚಿನ ಪಾಲನ್ನು ಹೊಂದಿದ್ದಾರೆ. ಅತ್ಯಂತ ಕೆಳಗಿನ ಶೇ.೨೦ರಷ್ಟು ಜನರು ಕೇವಲ ಶೇ. ೨.೬ರಷ್ಟು ಪಾಲನ್ನು ಮಾತ್ರ ಪಡೆದಿದ್ದಾರೆ. ಜಾಗತೀಕರಣವನ್ನು ಸ್ವಾಮೀಜಿಯವರು ಪ್ರತಿಪಾದಿಸಿದ್ದರು ಎಂಬುದು ಆಶ್ಚರ್ಯದ ಸಂಗತಿ. ದೇಶದ ಎಲ್ಲ ಸಮಸ್ಯೆಗಳನ್ನು ನಾವೇ ಬಗೆಹರಿಸಿಕೊಳ್ಳಲು ಸಾಧ್ಯವಿಲ್ಲ. ಜಾಗತೀಕರಣದ ಚೌಕಟ್ಟಿನಲ್ಲಿ ಅವನ್ನು ಸಾಧಿಸಬಹುದು. ಆದ್ದರಿಂದ "ರಫ್ತು ಮಾಡಿ", "ವಿದೇಶಗಳಲ್ಲಿ ವ್ಯಾಪಾರ ಕೇಂದ್ರಗಳನ್ನು ತೆಗೆಯಿರಿ" ಎಂದು ಸ್ವಾಮೀಜಿಯವರು ೧೯ನೆ ಶತಮಾನದಲ್ಲೇ ಒತ್ತಿ ಹೇಳಿದ್ದಾರೆ ಎಂಬುದನ್ನು ಗಮನಿಸಬೇಕು.

ಭಾರತದ ಬಡಜನರಿಗಷ್ಟೇ ಅಲ್ಲದೆ ಇಡೀ ವಿಶ್ವದ ಬಡವರ ಉದ್ಧಾರಕ್ಕೆ ಬದ್ಧರಾಗಬೇಕೆಂಬ ತಮ್ಮ ಸಂದೇಶದಿಂದ ಸ್ವಾಮೀಜಿ ಅರ್ಥಶಾಸ್ತ್ರಕ್ಕೆ ಮೆರಗು ಕೊಟ್ಟಿದ್ದಾರೆ.

## ಶಿಕ್ಷಣದ ಅರ್ಥಶಾಸ್ತ್ರ

ಶಿಕ್ಷಣವು ವಿಕಾಸಕ್ಕೆ ಅಗತ್ಯವಾದ ಮಾನವ ಕೌಶಲ್ಯಗಳನ್ನು ಮತ್ತು ಸಾಮರ್ಥ್ಯಗಳನ್ನು ಅಭಿವೃದ್ಧಿಪಡಿಸುವ ಪರಿಣಾಮಕಾರಿ ಸಾಧನ. ಸ್ವಾಮೀಜಿಯವರ ಪ್ರಕಾರ ಶಿಕ್ಷಣ "ಮಾನವನನ್ನು ರೂಪಿಸುವ" ಮತ್ತು "ನಡತೆಯನ್ನು ರೂಪಿಸುವ" ಸಾಧನ. ನೂರು ವರ್ಷಗಳಿಗೂ ಹಿಂದೆ ನಮ್ಮ ಶಿಕ್ಷಣ ವ್ಯವಸ್ಥೆಯ ಬಗ್ಗೆ ಅವರು ಮಾಡಿದ್ದ ದೋಷಾರೋಪಣೆ ಇಂದಿಗೂ ಅನ್ವಯಿಸುತ್ತದೆ. "ನೀವೇನು ಮಾಡುತ್ತಿದ್ದೀರಿ? ನಿಮ್ಮ ಕೈಗಳಲ್ಲಿ ಪುಸ್ತಕಗಳನ್ನು ಹಿಡಿದುಕೊಂಡು ಸಮುದ್ರದ ದಂಡೆಗಳಲ್ಲಿ ಓಡಾಡುತ್ತಿದ್ದೀರಿ, ಐರೋಪ್ಯಬುದ್ಧಿಯ ಕಸರತ್ತಿನ, ಜೀರ್ಣವಾಗದ ಕೆಲವು ತುಣುಕುಗಳನ್ನು ಪುನರುಚ್ಚರಿಸುತ್ತಿದ್ದೀರಿ ಮತ್ತು ನಿಮ್ಮ ಇಡೀ ಆತ್ಮ ಮೂವತ್ತು ರೂಪಾಯಿಗಳ ಗುಮಾಸ್ತಗಿರಿಯನ್ನು ಪಡೆಯಲು ದೀನವಾಗಿ ಬಗ್ಗಿದೆ ಅಥವಾ ಭಾರತದ ಯುವಜನರ ಅತ್ಯುನ್ನತ ಮಹದಾಸೆಯೆಂದರೆ ವಕೀಲನಾಗುವುದು.... ಪ್ರತಿಯೊಬ್ಬ ವಿದ್ಯಾರ್ಥಿಯನ್ನು ಹಸಿದ ಮಕ್ಕಳ ಗುಂಪೊಂದು ಹಿಂಬಾಲಿಸುತ್ತಿದ್ದು ಅನ್ನಕ್ಕಾಗಿ ಅಂಗಲಾಚುತ್ತಿದೆ. ನಿಮ್ಮನ್ನು, ನಿಮ್ಮ ಪುಸ್ತಕಗಳನ್ನು, ನಿಮ್ಮ ಗೌನ್‌ಗಳನ್ನು, ವಿಶ್ವವಿದ್ಯಾಲಯದ ನಿಮ್ಮ ಡಿಪ್ಲೊಮಾಗಳನ್ನು ಮತ್ತು ಇನ್ನೆಲ್ಲವನ್ನೂ ಮುಳುಗಿಸುವಷ್ಟು ನೀರು ಸಮುದ್ರದಲ್ಲಿಲ್ಲವೇ?" ಎಂದು ಸ್ವಾಮೀಜಿ ಕೇಳಿದ್ದರು.

ಶಿಕ್ಷಣದ ಪ್ರಾಮುಖ್ಯವನ್ನು ಒತ್ತಿ ಹೇಳುವ ಸ್ವಾಮೀಜಿಯವರ ಕಳಕಳಿಯ ನುಡಿಗಳಿವು : "ಶಿಕ್ಷಣ, ಶಿಕ್ಷಣ, ಶಿಕ್ಷಣ ಮಾತ್ರ. ಯೂರೋಪಿನ ಅನೇಕ ನಗರಗಳ ಮೂಲಕ ಪ್ರಯಾಣ ಮಾಡುತ್ತಾ, ಅಲ್ಲಿಯ ಬಡಜನರೂ ಸಹ ಹೊಂದಿರುವ ಶಿಕ್ಷಣ ಮತ್ತು ಸೌಲಭ್ಯಗಳನ್ನು ಗಮನಿಸುತ್ತಾ ಇದ್ದಾಗ ನಮ್ಮ ದೇಶದ ಜನತೆಯ ಸ್ಥಿತಿ ನನ್ನ ಮನಸ್ಸಿನಲ್ಲಿ ಮೂಡುತ್ತಿತ್ತು ಮತ್ತು ನಾನಾಗ ಕಣ್ಣೀರು ಸುರಿಸುತ್ತಿದ್ದೆ. ವ್ಯತ್ಯಾಸ ಎಲ್ಲಿದೆ? ಆದಕ್ಕೆ ನನಗೆ ಸಿಕ್ಕ ಉತ್ತರ ಶಿಕ್ಷಣ." ಈ ಮಾತುಗಳು ೧೦೦ ವರ್ಷಗಳಿಗಿಂತ ಹಿಂದೆ ಸ್ವಾಮೀಜಿಯವರ ವಿಶ್ಲೇಷಣೆಯಲ್ಲಿ ಬಂದಿವೆ. ಇತ್ತೀಚಿನ (೧೯೯೦) ಯು.ಎನ್.ಡಿ.ಪಿ ವಿಶ್ವಸಂಸ್ಥೆ ಮಾನವ ಅಭಿವೃದ್ಧಿ ವರದಿಗಳನ್ನು ಪ್ರತಿವರ್ಷ ಪ್ರಕಟಿಸುತ್ತಿದೆ. ಇವುಗಳ ಸಾರಾಂಶ ಮಾನವ ಅಬಿವೃದ್ಧಿಗೆ ಪೂರಕವಾಗುವ ಶಿಕ್ಷಣ ಮತ್ತು ಆರೋಗ್ಯ ಸೌಲಭ್ಯಗಳಿಗೆ ಹೆಚ್ಚು ಬಂಡವಾಳ ಹೂಡಬೇಕು ಎಂಬುದು. ಆದರೆ ಈಗ ನಡೆಯುತ್ತಿರುವುದೇನು? ಶಿಕ್ಷಣಕ್ಕೆ, ಅದರಲ್ಲೂ ಪ್ರಾಥಮಿಕ ಶಿಕ್ಷಣಕ್ಕೂ ಹಣದ ಕೊರತೆ, ರಾಷ್ಟ್ರದ ಬಂಡವಾಳ ಹೂಡಿಕೆಯಲ್ಲಿ ಶೇ.೬ನ್ನೂ ಮುಟ್ಟುವ ಸಾಧ್ಯತೆ ಇಲ್ಲ. ಸ್ವಾಮೀಜಿಯವರ ಚಿಂತನೆಯ ಆಳ ಎಷ್ಟಿತ್ತು ಎಂಬುದನ್ನು ಊಹೆಗೆ ಬಿಡುವುದು ಒಳಿತು. ನಾಯಕರೂ ವಿಫಲಗೊಂಡಿದ್ದಾರೆ ಎಂಬ ಅಂಶವನ್ನು ಸ್ವಾಮೀಜಿಯವರ ಮಾತುಗಳು ನಮಗೆ ಚುಚ್ಚಿ ನೆನಪು ಮಾಡಿಕೊಡುತ್ತವೆ.

## ಉದ್ಯೋಗ ಅರ್ಥಶಾಸ್ತ್ರ

ಭಾರತೀಯರು "ಕರ್ಮ" ಸಿದ್ಧಾಂತವನ್ನು ಅಂಗೀಕರಿಸಿದ್ದಾರೆ ಹಾಗೂ ಅದರಿಂದಾಗಿ ದಾರಿದ್ರ್ಯ ಮತ್ತು ಕಳಪೆ ಅಭಿವೃದ್ಧಿಯ ಬಗ್ಗೆ ಅವರು ತಮಗೆ ತಾವೇ ಸಮಾಧಾನಪಟ್ಟುಕೊಳ್ಳುತ್ತಾರೆ ಎಂದು ಸಾಮಾನ್ಯವಾಗಿ ವಾದಿಸಲಾಗುತ್ತಿದೆ. ತಮ್ಮ ಸ್ವಂತ ಏಳಿಗೆಗಾಗಿಯೇ ಕಷ್ಟಪಟ್ಟು ದುಡಿಯಲು ಜನರು ಸಿದ್ಧರಾಗಿಲ್ಲ. ಭಾರತದಲ್ಲಿ ಜನರು "ಬೊಗಳೆ ಮಾತನಾಡುವವರು" ಮತ್ತು "ದೈಹಿಕವಾಗಿ ದುರ್ಬಲರು" ಎಂದು ಸ್ವಾಮೀಜಿ ಗಮನಿಸಿದ್ದರು. ಆದ್ದರಿಂದ ತಾಯ್ನಾಡಿನ ಅಭಿವೃದ್ಧಿಗಾಗಿ ತಮ್ಮ ಅಳಿಲು ಸೇವೆ ಸಲ್ಲಿಸಲು ಸಾಧ್ಯವಾಗುವಂತೆ ಜನರು ಮೊದಲಿಗೆ ಬಲಿಷ್ಠರಾಗಲು ಪ್ರಯತ್ನಿಸಬೇಕು. ದಾರಿದ್ರ್ಯದ ರೋಗಕ್ಕೆ ಉದ್ಯೋಗ ಸೃಷ್ಟಿಯೇ ಮದ್ದು. ಜನರು ಪುಷ್ಟಿಕರ ಆಹಾರ ತಿನ್ನಬೇಕಾದರೆ ಅವರಿಗೆ ಸಂಪಾದನೆ ಇರಬೇಕು. ಆದ್ದರಿಂದ ಎಲ್ಲರಿಗೂ ಉದ್ಯೋಗ ಒದಗಿಸುವುದು ಯೋಜಿತ ಆರ್ಥಿಕಾಭಿವೃದ್ಧಿಯ ಗುರಿಯಾಗಬೇಕು. ಸ್ವಾತಂತ್ರ್ಯ ಬಂದು ಐದು ದಶಕಗಳಿಗೂ ಹೆಚ್ಚು ಕಾಲ ಸಂದಿದ್ದರೂ ಎಲ್ಲರಿಗೂ ಉದ್ಯೋಗ ಒದಗಿಸುವ ಗುರಿ ಎಲ್ಲೋ ದೂರದಲ್ಲಿ ಉಳಿದಿದೆ. ಬೌದ್ಧಿಕ ಪ್ರಗತಿಯ ಜೊತೆಜೊತೆಯಲ್ಲಿ ಉತ್ತಮ ದೈಹಿಕ ಆರೋಗ್ಯವೂ ಇರಬೇಕು. "ನಾವು ಭೌತಿಕ ನಾಗರಿಕತೆಯ ಬಗ್ಗೆ ಮೂರ್ಖರಂತೆ ಮಾತನಾಡುತ್ತೇವೆ. ಬಡವರಿಗೆ ಉದ್ಯೋಗವನ್ನು ಸೃಷ್ಟಿಸಲು ಭೌತಿಕ ನಾಗರಿಕತೆ, ಅಷ್ಟೇ ಅಲ್ಲ, ವಿಲಾಸ ಜೀವನವೂ ಆವಶ್ಯಕ," ಎಂದು ಸ್ವಾಮಿ ವಿವೇಕಾನಂದರು ತಮ್ಮ ಆರ್ಥಿಕ ದೂರದೃಷ್ಟಿಯನ್ನು ವ್ಯಕ್ತಪಡಿಸಿರುವರು.

## ವಿಜ್ಞಾನ ಮತ್ತು ಅಭಿವೃದ್ಧಿ

ಬಡವರ ಏಳಿಗೆ ಮತ್ತು ಹಿಂದುಳಿದ ಪ್ರದೇಶಗಳ ಉದ್ಧಾರಕ್ಕೆ ಇರುವ ಅಡ್ಡಿ ಆಡಚಣೆಗಳನ್ನು ಸ್ವಾಮೀಜಿಯವರು ಚೆನ್ನಾಗಿ ಅರಿತಿದ್ದರು. ಜನರ ಕಲ್ಯಾಣಕ್ಕಾಗಿ ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಬಳಸಬೇಕೆಂದು ವಾದಿಸಿದ ಏಕಮಾತ್ರ ಸಂತ ತತ್ವಜ್ಞಾನಿ ಎಂದರೆ ಬಹುಶಃ ಸ್ವಾಮೀಜಿಯವರು. ಅಂದಿನ ಶ್ರೀಮಂತ ಕೈಗಾರಿಕೋದ್ಯಮಿ ಹಿರಿಯ ಶ್ರೀ ಜೆಮ್‌ಶೆಡ್ಜಿ ತಾತಾ ಅವರನ್ನು ತಮ್ಮ ವಿದೇಶ ಯಾತ್ರೆಯ ಸಂದರ್ಭದಲ್ಲಿ ಭೇಟಿಯಾಗಿದ್ದರು. ಆ ಭೇಟಿಯ ಪ್ರೇರಣೆಯಿಂದಲೆ ಬೆಂಗಳೂರಿನಲ್ಲಿ "ತಾತಾ ವಿಜ್ಞಾನ ಸಂಸ್ಥೆ" ಸ್ಥಾಪಿತವಾಯಿತು. ಇಡೀ ವಿಶ್ವದಲ್ಲೇ ಪ್ರಖ್ಯಾತವಾಗಿರುವ, ಈಗಿನ ಹೆಸರೊತ್ತಿರುವ ಭಾರತೀಯ ವಿಜ್ಞಾನ ಸಂಸ್ಥೆಯೇ ಸ್ವಾಮೀಜಿಯವರ ದೂರದೃಷ್ಟಿಯಲ್ಲಿ ಕಂಡಿದ್ದ ವಿಜ್ಞಾನ ಸಂಸ್ಥೆ. ಶ್ರೀಮಂತರು ಸಾಮಾಜಿಕ ಜವಾಬ್ದಾರಿಯುಳ್ಳವರಾಗಿ, ದೇಶದ ಸರ್ವತೋಮುಖ ಪ್ರಗತಿಗಾಗಿ ಶ್ರಮಿಸುವಂತೆ ಮಾಡುವ, ಬೇರೆ ರಾಷ್ಟ್ರಗಳ ಜೊತೆಗೆ ತಲೆ ಎತ್ತಿ ನಿಲ್ಲುವ ವಿಜ್ಞಾನ ಸಂಶೋಧನಾ ಸಂಸ್ಥೆಯ ಆವಶ್ಯಕತೆಯನ್ನು ಮನಗಂಡ ಏಕೈಕ ವಿಶ್ವಮಾನವ ಸ್ವಾಮೀಜಿಯವರು. ೨೧ನೇ ಶತಮಾನದಲ್ಲಿ ಈಗ ಸರ್ಕಾರವು ಸಂಶೋಧನೆ ಮತ್ತು ಅಭಿವೃದ್ಧಿಯ ಮೇಲೆ ಹೆಚ್ಚು ಬಂಡವಾಳ ಹೂಡಿಕೆಗೆ ಆದ್ಯತೆ ಕೊಡುತ್ತಿದೆ.

## ಸಮತಾವಾದದ ಅರ್ಥಶಾಸ್ತ್ರ

ಆರ್ಥಿಕಾಭಿವೃದ್ಧಿಯ ಫಲಗಳು ಸಮಾನವಾಗಿ ಹಂಚಿಕೆ

ಯಾದಾಗ ಮತ್ತು ಶ್ರೀಮಂತರು ಹಾಗೂ ಬಡವರ ನಡುವಣ ಅಂತರ ನಿವಾರಣೆಯಾದಾಗ ಮಾತ್ರ ಆರ್ಥಿಕಾಭಿವೃದ್ಧಿಗೆ ಅರ್ಥ ವಿರುತ್ತದೆ. ಇತ್ತೀಚಿನವರೆಗೆ ಅಭಿವೃದ್ಧಿ ಕುರಿತ ಈ ದೇಶದ ಯೋಜನಾ ಗುರಿಗಳಲ್ಲಿ ಹೆಚ್ಚು ಸಮಾನವಾದ ಸಮಾಜವನ್ನು ಸೃಷ್ಟಿಸಲು ವರಮಾನದ ಪುನರ್‌ಹಂಚಿಕೆಯಾಗಬೇಕೆಂಬುದು ಒಂದಾಗಿತ್ತು. ಬಡವರ ಸ್ಥಿತಿಗತಿಗಳನ್ನು ಸುಧಾರಿಸುವ ಬಗ್ಗೆ ತಮ್ಮ ಪಾತ್ರವನ್ನು ಶ್ರೀಮಂತರು ಅರಿತುಕೊಳ್ಳಬೇಕು ಹಾಗೂ ಸಂಪತ್ತನ್ನು ಉತ್ತಮವಾಗಿ ಮತ್ತು ಸಮಾನವಾಗಿ ಹಂಚಲು ಮುಂದೆ ಬರ ಬೇಕು. ವರಮಾನದ ಪುನರ್‌ಹಂಚಿಕೆಯ ಗುರಿಯನ್ನು ಸಾಧಿಸಲು ರಾಜ್ಯಾಧಿಕಾರ ತೆರಿಗೆಗಳ ಕಾರ್ಯತಂತ್ರವನ್ನೂ ಕೈಗಾರಿಕಾ ನಿಯಂತ್ರಣ ಸಾಧನವನ್ನೂ ಉದ್ದೇಶಪೂರ್ವಕವಾಗಿ ಬಳಸಿತು. ಆದರೆ ಈಗ ಈ ಗುರಿಯನ್ನು ಹಿಂದಕ್ಕೆ ತಳ್ಳಿರುವುದು ದುರ್ದೈವದ ಸಂಗತಿ. ವರಮಾನದಲ್ಲಿ ಅಧಿಕ ಅಸಮಾನತೆಗಳುಳ್ಳ ಮತ್ತು ಪ್ರತಿಷ್ಠಿತ ವರ್ಗವೊಂದನ್ನು ಹೊಂದಿದ ಸಮಾಜವನ್ನು ಬೆಳೆಸುತ್ತಾ ಹೋಗುವುದರಿಂದ ದೀರ್ಘ ಕಾಲಾನಂತರ ಎಂತಹ ವಿನಾಶಕಾರಿ ಪರಿಣಾಮಗಳುಂಟಾಗಬಹುದು ಎಂಬುದನ್ನು ಸ್ವಾಮೀಜಿಯವರು ಮೊದಲೇ ಮನಗಂಡಿದ್ದರು. "ವಿಶೇಷ ಸವಲತ್ತುಗಳು ಮತ್ತು ಪ್ರತ್ಯೇಕವಾದ ಬೇಡಿಕೆಗಳ ದಿನಗಳು ಹೋಗಿವೆ. ತನ್ನದೇ ಗೋರಿ ಯನ್ನು ಅಗೆಯುವುದು ಪ್ರತಿಯೊಂದು ಶ್ರೀಮಂತವರ್ಗದ ಕರ್ತವ್ಯ ಹಾಗೂ ಈ ಕಾರ್ಯವನ್ನು ಅದು ಬೇಗ ಮಾಡಿದಷ್ಟು ಒಳ್ಳೆ ಯದು. ಇದರಲ್ಲಿ ವಿಳಂಬವಾದಂತೆ ಶ್ರೀಮಂತಿಕೆಯ ಹುಣ್ಣು ಕೊಳೆ ಯುತ್ತಾ ಹೋಗುತ್ತದೆ ಹಾಗೂ ಅದಕ್ಕೆ ಇನ್ನೂ ಕೆಟ್ಟ ಸಾವು ಉಂಟಾಗುತ್ತದೆ" ಎಂದು ಸ್ವಾಮೀಜಿಯವರು ಹೇಳಿದ್ದಾರೆ.

ಸ್ವಾಮೀಜಿಯವರು ಸಮಾನತೆಯನ್ನು ಒತ್ತಿ ಹೇಳಿದಾಗ, ಆ ಸಮಾನತೆ ಒಬ್ಬ ವ್ಯಕ್ತಿ ಮತ್ತು ಇನ್ನೊಬ್ಬನ ನಡುವೆ ಯಾವುದೇ ಪಕ್ಷಪಾತವಿಲ್ಲದ್ದು ಎಂಬರ್ಥದಲ್ಲಿ ಹೇಳಿದ್ದಾಗಿತ್ತು. ಒಂದು ದೃಷ್ಟಿ ಯಲ್ಲಿ ಅವರು ಜನರ ಸಂಪತ್ತನ್ನು ಜನರ ಒಳಿತಿಗಾಗಿ ಬಳಸುವ ಪಾರುಪತ್ಯ ವ್ಯವಸ್ಥೆ (ಟ್ರಸ್ಟಿಷಿಪ್) ಇರಬೇಕೆಂದು ಬಯಸಿದ್ದರು. ಅನಂತರ ಈ ವಿಚಾರವು ಮಹಾತ್ಮ ಗಾಂಧಿಯವರ ಬೋಧನೆ ಗಳಲ್ಲಿ ಕಂಡುಬಂದಿತು. ಸಮಾಜ ನೆಮ್ಮದಿಯಿಂದ ಉಳಿಯ ಬೇಕಾದರೆ ಉಳ್ಳವರು-ಇಲ್ಲದವರು, ಮಾಲೀಕರು-ಕಾರ್ಮಿಕರು, ಶೋಷಕರು-ಶೋಷಿತರು ಇವರ ನಡುವೆ ಈಗಿರುವ ಯಾವುದೇ ರೀತಿಯ ಪಕ್ಷಪಾತಕ್ಕೆ ಅವಕಾಶವಿರಬಾರದು. ಎಲ್ಲರ ಏಳಿಗೆಗಾಗಿ, ಅದರಲ್ಲೂ ಬಡವರ ಏಳಿಗೆಗಾಗಿ ತಮ್ಮ ಸಂಪತ್ತನ್ನು ಹಂಚಿ ಕೊಳ್ಳಲು ಬಂಡವಾಳಶಾಹಿ ವರ್ಗದವರು ಒಪ್ಪಬೇಕು ಎಂಬ ಮುನ್ನೆಚ್ಚರಿಕೆಯನ್ನು ಕೊಡುವ ರೀತಿಯಲ್ಲಿತ್ತು ಸ್ವಾಮೀಜಿಯವರ ಮಾತುಗಳು. ಸಮಾನ ಅವಕಾಶಗಳು ಎಲ್ಲ ಪ್ರಜಾಪ್ರಭುತ್ವಗಳ ಮೂಲಭೂತ ಅಗತ್ಯ. ಅಭಿವೃದ್ಧಿಯ ಪ್ರಕ್ರಿಯೆಗೆ ಎಲ್ಲೆಲ್ಲೂ ಮಾನವನ ಕ್ಷೇಮವನ್ನು ಕಾಣಬಯಸುವ ದೃಷ್ಟಿಯ ಅಗತ್ಯವಿದ್ದರೆ, ವರ್ಗಭೇದಗಳು ಮತ್ತು ವರ್ಗ ಸಂಘರ್ಷಗಳಿಗೆ ಎಡೆಯೇ ಇರುವುದಿಲ್ಲ. **"ಕ್ರಾಂತಿಕಾರಿ ಮಾನವತಾವಾದ"** ಸ್ವಾಮೀಜಿಯವರ ಉಪದೇಶದ ಮುಖ್ಯ ವಿಷಯವಾಗಿತ್ತು. ವ್ಯಕ್ತಿಗಳ ವಿಚಾರ ಮತ್ತು ಕ್ರಿಯೆಯಲ್ಲಿ ತೀವ್ರ ಬದಲಾವಣೆಯಾಗಬೇಕೆಂಬ ಅಂಶ ಅವರ ಉಪದೇಶದಲ್ಲಿ ಸೇರಿತ್ತು. ಅದಕ್ಕಾಗಿಯೇ ಸ್ವಾಮೀಜಿ ಯವರು "ನಾನೊಬ್ಬ ಸಮತಾವಾದಿ" ಎಂದು ಹೇಳಿಕೊಂಡಿದ್ದಾರೆ.

---

**ಓ ಭಾರತೀಯ ಕಾರ್ಮಿಕ ವರ್ಗದವರೆ! ನಿಮ್ಮ ಮೌನ, ನಿರಂತರ ಪರಿಶ್ರಮದಿಂದಾಗಿ ಬ್ಯಾಬಿಲೋನ್, ಪರ್ಶಿಯಾ, ಅಲೆಕ್ಸಾಂಡ್ರಿಯ, ಗ್ರೀಸ್, ರೋಮ್, ವೆನಿಸ್, ಜಿನೀವಾ, ಡೆನ್ಮಾರ್ಕ್ ಹಾಲೆಂಡ್ ಮತ್ತು ಇಂಗ್ಲೆಂಡ್‌ಗಳು ಒಂದಾದಮೇಲೊಂದರಂತೆ ಪ್ರಸಿದ್ಧಿಯನ್ನೂ ಪಾರಮ್ಯವನ್ನೂ ಪಡೆದವು. ಆದರೆ ನೀವಾದರೊ!—ಅಯ್ಯೋ, ನಿಮ್ಮ ಬಗ್ಗೆ ಚಿಂತಿಸುವವರಾರು?**

***—ಸ್ವಾಮಿ ವಿವೇಕಾನಂದ***

---

## ಗ್ರಾಮೀಣ ಅಭಿವೃದ್ಧಿ

ಪ್ರಾದೇಶಿಕ ಅಸಮಾನತೆಗಳನ್ನು ನಿವಾರಿಸಿ, ನಿಜವಾದ ಭಾರತ ಇರುವ ಹಳ್ಳಿಗಳ ಅಭಿವೃದ್ಧಿಯನ್ನು ಸಾಧಿಸುವುದು ಭಾರತದ ಅಭಿ ವೃದ್ಧಿಯ ಪ್ರಮುಖ ಗುರಿಗಳಲ್ಲಿ ಒಂದಾಗಬೇಕು. ಗ್ರಾಮೀಣಾ ಭಿವೃದ್ಧಿಗೆ ಯೋಜನೆಯಲ್ಲಿ ತೊಡಗಿಸುವ ಹಣದ ಬಗ್ಗೆ ಒಂದಿಷ್ಟು ಬಡಾಯಿ ಕೊಚ್ಚಿಕೊಂಡರೂ ಇಂದಿನ ಅಭಿವೃದ್ಧಿ ಚಟು ವಟಿಕೆಗಳಲ್ಲಿ ನಗರಗಳಿಗೆ ಪ್ರಾಧಾನ್ಯ ನೀಡಿರುವುದು ಎದ್ದು ಕಾಣು ತ್ತದೆ. ಜವಾಬ್ದಾರಿ ಸ್ಥಾನದಲ್ಲಿರುವವರಲ್ಲಿ ಹಳ್ಳಿಗಳ ಜನರ ಬಗ್ಗೆ ಕಾಳಜಿ ವಹಿಸುವ ಮತ್ತು ಅವರ ಸಂಪೂರ್ಣ ಅಭಿವೃದ್ಧಿಗೆ ಶ್ರಮಿ ಸುವ ನಿರ್ಧಾರ ನಿಜಕ್ಕೂ ಇಲ್ಲವಾಗಿದೆ. ಸ್ವಾಮೀಜಿಯವರು ಯುವಜನರನ್ನು ಕುರಿತು ಹೀಗೆ ಹೇಳಿದರು: "ಬಡವರ, ಏನೂ ತಿಳಿಯದವರ, ದಮನಕ್ಕೊಳಗಾದವರ ಪರವಾದ ಈ ಸಹಾನು ಭೂತಿಯನ್ನು, ಈ ಹೋರಾಟವನ್ನು ಯುವಕರಾದ ನಿಮಗೆ ಬಿಟ್ಟು ಕೊಡುತ್ತೇನೆ. ಪ್ರತಿದಿನ ಕೆಳಗೆ ಕುಸಿಯುತ್ತಲೇ ಇರುವ ಮೂರು ನೂರುದಶಲಕ್ಷ ಜನರ ಉದ್ಧಾರಕ್ಕೆ ನಿಮ್ಮ ಇಡೀ ಜೀವನವನ್ನು ಮುಡಿಪಾಗಿಡುವ ಪ್ರತಿಜ್ಞೆ ಕೈಗೊಳ್ಳಿ. ನಾವು ಭಾರತವನ್ನು ಹಾಗೂ ಇಡೀ ಜಗತ್ತನ್ನು ಎಬ್ಬಿಸಬೇಕು..." "ಹಳ್ಳಿಯಿಂದ ಹಳ್ಳಿಗೆ ಹೋಗಿ ಮಾನವತೆಗೆ ಹಾಗೂ ಇಡೀ ವಿಶ್ವಕ್ಕೆ ಒಳ್ಳೆಯದನ್ನು ಮಾಡಿ. ಇತ ರರಿಗೆ ಮೋಕ್ಷವನ್ನು ಸಂಪಾದಿಸಲು ನೀವೇ ನರಕಕ್ಕೆ ಹೋಗಿ." ಇಂದಿಗೂ ಗ್ರಾಮೀಣ ಅಭಿವೃದ್ಧಿ ಮರೀಚಿಕೆಯಾಗಿಯೇ ಉಳಿದಿದೆ.

## ಮಾನವ ಅಭಿವೃದ್ಧಿ ಅರ್ಥಶಾಸ್ತ್ರ

ಅಭಿವೃದ್ಧಿಯ ಮುಖ್ಯವಾಹಿನಿಗೆ ಹೆಂಗಸರನ್ನು ಸೇರಿಸದೆ ಇದ್ದಲ್ಲಿ ಆರ್ಥಿಕಾಭಿವೃದ್ಧಿ ತನ್ನ ಅರ್ಥವನ್ನು ಕಳೆದುಕೊಳ್ಳುತ್ತದೆ. ಮಹಿಳೆಯರ ಅಭಿವೃದ್ಧಿ ಬಗ್ಗೆ ಯೋಚಿಸಲು ಸ್ವಾತಂತ್ರ್ಯಾನಂತರ ೪೦ ವರ್ಷಗಳು ಬೇಕಾದವು. ವಿಧವಾ ಪುನರ್ವಿವಾಹದಂತಹ ಸುಧಾರಣೆಗಳಿಂದ ಮಾತ್ರ ಏನೂ ಪರಿಣಾಮವಾಗಲಿಕ್ಕಿಲ್ಲ ಎಂದು

ಬಹಳ ಹಿಂದೆಯೇ ವಾದಿಸಿದ್ದ ಸ್ವಾಮೀಜಿಯವರು ಮಹಿಳೆಯರ ಸಮಗ್ರ ಅಭಿವೃದ್ಧಿಯ ಬಗ್ಗೆ ಒಂದು ಸಮಗ್ರ ನೀತಿ ಹೊಂದಿರ ಬೇಕು ಹಾಗೂ ಸಮಾಜ ವ್ಯವಸ್ಥೆಯೂ ಆಮೂಲಾಗ್ರವಾಗಿ ಬದ ಲಾಗಬೇಕು, ಮಹಿಳೆಯರಲ್ಲಿ ಅನಕ್ಷರತೆ ನಿವಾರಣೆಯಾಗಬೇಕು ಎಂದಿದ್ದರು. ಅಭಿವೃದ್ಧಿಯ ಪ್ರಕ್ರಿಯೆಯಲ್ಲಿ ಮಹಿಳೆಯರು ಸಕ್ರಿಯವಾಗಿ ಭಾಗವಹಿಸಬೇಕು ಎಂದು ಸ್ವಾಮೀಜಿಯವರು ಒತ್ತಿ ಹೇಳಿದ್ದರು.

### ಅರ್ಥಶಾಸ್ತ್ರ ಮತ್ತು ನೈತಿಕತೆ

ಅಭಿವೃದ್ಧಿಯು ತನ್ನದು ಎನ್ನುವುದನ್ನು ಅಳಿಸುವಂತಹ ತ್ಯಾಗದ ಗುಣವನ್ನು ನಾಯಕರಿಂದ ಅಪೇಕ್ಷಿಸುತ್ತದೆ. ದುರದೃಷ್ಟವಶಾತ್, ಪ್ರತಿ ಆದರ್ಶದೊಂದಿಗೆ ಸ್ವಾರ್ಥ, ಸ್ವ-ಹಿತವೂ ಸೇರಿರುತ್ತದೆ. ಬುದ್ಧಿಯನ್ನು ನಿಯಂತ್ರಿಸುವ, ಹಾನಿಕಾರಕ ಹುಟ್ಟುಗುಣಗಳಿಂದ ಮುಕ್ತರಾಗುವ ಮತ್ತು ಸ್ವಾರ್ಥಕ್ಕೆ ಬಲಿಯಾಗದಿದ್ದರೆ ದೊರೆಯುವ ಸಂತೋಷವನ್ನು ಪಡೆಯುವ ಪ್ರವೃತ್ತಿಯನ್ನು ಜನರು ಬೆಳೆಸಿ ಕೊಳ್ಳಬೇಕು. ನಾವು ಹುಟ್ಟಿರುವುದು ಸೇವೆ ಮಾಡುವುದಕ್ಕೆ, ಸಹಾಯ ಮಾಡುವುದಕ್ಕೂ ಅಲ್ಲ.

ಅಭಿವೃದ್ಧಿಗೆ ಉತ್ತಮ ಆಧಾರಸ್ವರೂಪದ ಸಾಂಸ್ಥಿಕ ಸೌಲಭ್ಯ ಗಳೂ ಮತ್ತು ಸಂಘಟನಾ ಶಕ್ತಿಯೂ ಬೇಕು. ಅಭಿವೃದ್ಧಿ ಯೋಜನೆಗಳ ಅನುಷ್ಠಾನ ಕಳಪೆಯಾದ ರೀತಿಯಲ್ಲಿ ಆಗುವುದಕ್ಕೆ ಸಂಸ್ಥೆಗಳ ದೌರ್ಬಲ್ಯಗಳು ಮತ್ತು ಈ ಸಂಸ್ಥೆಗಳಿಗೆ ಸೂಕ್ತ ನಾಯ ಕತ್ವ ಇಲ್ಲದಿರುವುದೇ ಕಾರಣ ಎಂದು ಅನೇಕ ಸಲ ಬೆರಳು ಮಾಡಿ ತೋರಿಸಲಾಗಿದೆ. ಜನಸಾಮಾನ್ಯರ ಒಳಿತಿಗೆ ದೇಶದ ಸಂಪ ನ್ಮೂಲಗಳ ಬಳಕೆಯಿಂದ ಗರಿಷ್ಠ ಅನುಕೂಲಗಳನ್ನು ಪಡೆದು ಕೊಳ್ಳುವ ದಿಸೆಯಲ್ಲಿ ಮಾನವ ಸಂಪನ್ಮೂಲಗಳ ಅಭಿವೃದ್ಧಿ ಹೆಚ್ಚಿನ ಪ್ರಾಮುಖ್ಯ ಹೊಂದಿದೆ.

ಈ ಹಿನ್ನೆಲೆಯಲ್ಲಿ ಸ್ವಾಮೀಜಿಯವರ ಧೀರೋದಾತ್ತ ಸಂದೇಶಗಳು ನಮಗೆ ಮಾರ್ಗದರ್ಶನ ಮಾಡುತ್ತವೆ. "ಈ ತರುಣ ರನ್ನು ಸಂಘಟಿಸಲು ನಾನು ಹುಟ್ಟಿದ್ದೇನೆ: ಹಾಗೆ ನೋಡಿದರೆ ಪ್ರತಿ ಯೊಂದು ನಗರದಲ್ಲಿ ಇನ್ನೂ ನೂರಾರು ಯುವಕರು ನನ್ನೊಂದಿಗೆ ಸೇರಲು ಸಿದ್ಧರಾಗಿದ್ದಾರೆ, ಅತ್ಯಂತ ದರಿದ್ರರಿಗೆ ಮತ್ತು ತೀವ್ರ ದಮನಕ್ಕೊಳಗಾದವರಿಗೆ ನೆಮ್ಮದಿ, ನೈತಿಕತೆ, ಧರ್ಮ, ಶಿಕ್ಷಣ ವನ್ನು ಒದಗಿಸಲು ಈ ತರುಣರನ್ನು ಭಾರತದಾದ್ಯಂತ ತಡೆಯ ಲಾಗದ ಅಲೆಗಳಂತೆ ಕಳಿಸಲು ನಾನು ಇಚ್ಛಿಸುತ್ತೇನೆ. ಇದನ್ನು ನಾನು ಮಾಡುತ್ತೇನೆ ಇಲ್ಲವೆ ಮಡಿಯುತ್ತೇನೆ" ಎಂದು ಸ್ವಾಮೀಜಿ ಹೇಳಿದ್ದರು. ತ್ಯಾಗಕ್ಕೆ ಸಿದ್ಧವಾಗಿರುವ ನಾಯಕತ್ವ ನಮಗೆ ಬೇಕು. ನಮ್ಮ ದೇಶದಲ್ಲಿ ನಾಯಕತ್ವದ ಗುಣಗಳು ಇಲ್ಲದಿರುವುದನ್ನು ಸ್ವಾಮೀಜಿಯವರು ಹೇಗೆ ಮನಗಂಡಿದ್ದರು ನೋಡಿ !

ಪ್ರಜಾಸತ್ತಾತ್ಮಕ ಸಮಾಜವೊಂದರಲ್ಲಿ ಅಭಿವೃದ್ಧಿಗೆ ಹಲವು ಅಗತ್ಯಗಳು ಈಡೇರಬೇಕು. ಅವುಗಳಲ್ಲಿ ನೈತಿಕತೆ ಆಚರಣೆಯಲ್ಲಿರ ಬೇಕಾದ್ದು ಮತ್ತು ಸಾಮಾಜಿಕ ವ್ಯವಸ್ಥೆ ಇರಬೇಕಾದ್ದು ಸೇರಿವೆ. ಇವೆರಡೂ ಇಲ್ಲದಿದ್ದಲ್ಲಿ ಪ್ರಜಾಪ್ರಭುತ್ವ ಭ್ರಷ್ಟವಾಗುತ್ತಾ ಹೋಗಿ ಸಮಾಜದಲ್ಲಿ ಎಲ್ಲೆಲ್ಲೂ ಹಾಹಾಕಾರ ಉಂಟಾಗುತ್ತದೆ. ಆದ್ದರಿಂದ ಸಮಾಜದ ನೈತಿಕ ಹಂದರವನ್ನು ಬಲಪಡಿಸಬೇಕಾದ್ದು ಈಗ ಅಗತ್ಯವಾಗಿದೆ.

ದುರ್ದೈವವಶಾತ್ ರಾಜಕಾರಣಿಗಳು ನಡೆಸುವ ಸರ್ಕಾರ ಈ ಮಹತ್ಕಾರ್ಯದಲ್ಲಿ ಹಿಂದುಳಿದಿದೆ. ಅದಕ್ಕೆ ತದ್ವಿರುದ್ಧವಾಗಿ ನೈತಿಕ ಮೌಲ್ಯಗಳು ಸತತವಾಗಿ ನಶಿಸುತ್ತಿವೆ. "ಮಾನವತೆಯ ರಚನಾತ್ಮಕ ಪುನರುತ್ಥಾನ"ವನ್ನು ಸಾಧಿಸಲು ಸರ್ಕಾರದ ಸ್ಥಾನದಲ್ಲಿ ವಿಜ್ಞಾನಿ ಗಳು, ಸಂತರು, ನೈತಿಕವಾಗಿ ಮೇಲ್ಮಟ್ಟದಲ್ಲಿರುವ ನಾಯಕರು, ಆಧ್ಯಾತ್ಮಿಕ ನಾಯಕರು ಮತ್ತು ಸೌಂದರ್ಯಪ್ರಜ್ಞೆಯನ್ನುಳ್ಳ ನಾಯಕರು ಬರಬೇಕಾದ ಅಗತ್ಯವಿದೆ ಎಂದು ತೋರುತ್ತದೆ. ಈ ದೃಷ್ಟಿಯಿಂದ ನೋಡಿದಾಗ, ನಡತೆಯನ್ನು ರೂಪಿಸುವ ಬಗ್ಗೆ ಸ್ವಾಮೀಜಿಯವರು ಹೇಳಿರುವ ಮಾತುಗಳು ಅತ್ಯಂತ ಪ್ರಬಲ ವಾಗಿವೆ. ಕೆಲಸವನ್ನು ಪರಿಣಾಮಕಾರಿಯಾಗಿ ಮಾಡಲು ಅದನ್ನು ಮಾಡುವ ಕೈ ದಕ್ಷವಾಗಿರಬೇಕೆಂದು ಅವರು ಬಯಸಿದ್ದರು. ಇದಲ್ಲದೆ, ಬಡಜನರ ದುಃಸ್ಥಿತಿಯ ಬಗ್ಗೆ ಕಾಳಜಿ ಹೊಂದಿರುವ ಸಹನಶೀಲ ಮೃದು ಹೃದಯದ ಅಗತ್ಯವೂ ಇದೆ. ಮುಕ್ತ ವಿಚಾರ ಗಳನ್ನು ಹೊಂದಿದ, ಯಾವುದೇ ಮೋಡಗಳು ಕವಿಯದ ಮಿದುಳಿನ ಅಗತ್ಯವೂ ಇದೆ. ಇವೆಲ್ಲವುಗಳ ಸಂಯೋಜನೆಯಿಂದ ದೇಶದ ಸಾಮಾಜಿಕ-ಆರ್ಥಿಕ ಅಭಿವೃದ್ಧಿಗೆ ನೆರವಾಗುವ ಪರಿಪೂರ್ಣ ವ್ಯಕ್ತಿತ್ವ ಮತ್ತು ನಡತೆ ರೂಪುಗೊಳ್ಳುತ್ತದೆ. ಆರ್ಥಿಕಾಭಿವೃದ್ಧಿಗೆ ಯೋಜನೆ ತಯಾರಿಸುವಾಗ ಸ್ವಾಮೀಜಿಯವರ ವಿಚಾರಗಳ ಸಾಗರದಿಂದ ನಾವು ಪಡೆಯಬೇಕಾದ್ದು ಬಹಳ ಇದೆ. ಇಂತಹ ದೊಡ್ಡ ಸಾಗರದಿಂದ ನಾವು ಒಂದು ಹನಿಯನ್ನೂ ಸಹ ಸರಿಯಾಗಿ ಬಳಸಿದಂತಿಲ್ಲ.

ಬಡತನ ನಿವಾರಣೆ, ಬಡವರ ಸೇವೆಯೇ ತಮ್ಮ ಚಿಂತನೆ ಎಂಬ ಸಂದೇಶವನ್ನು ಕೊಟ್ಟಿರುವ ಸ್ವಾಮಿ ವಿವೇಕಾನಂದರು ಶತ ಮಾನಗಳ ಮುಂದಿದ್ದು ಕ್ರಾಂತಿಕಾರಿ ಮೌಲ್ಯಾಧಾರಿತ ಅರ್ಥ ಶಾಸ್ತ್ರವನ್ನು ಕರಗತ ಮಾಡಿಕೊಂಡಿದ್ದರೆಂಬುದನ್ನು ಕಾಣಬಹುದು. ◆

**ಸ್ವಾಮೀಜಿಯವರು ಅಮೆರಿಕದಿಂದ ಜಗತ್‌ಪ್ರಸಿದ್ಧರಾಗಿ ಹಿಂತಿರುಗಿದ ನಂತರ ಅವರ ತಾಯಿ ಕಾಳಿಮಾತೆಗೆ ತಾವು ಹೊತ್ತಿದ್ದ ಹರಕೆಯನ್ನು ಈಡೇರಿಸಲು ಸಾಧ್ಯವೇ ಎಂದು ಮಗನನ್ನು ಕೇಳಿದರು. ಈಡೇರಿಸುವುದಾಗಿ ತಕ್ಷಣ ಉತ್ತ ರಿಸಿದ ಸ್ವಾಮೀಜಿಯವರು "ನನಗೆ ನೀವು ಅಪ್ಪಣೆ ಕೊಡಿ ಸಾಕು" ಎಂದು ತಾಯಿಗೆ ತಿಳಿಸಿ "ಏನು ಹರಕೆ ? " ಎಂದು ಕೇಳಿದರು. "ನೀನು ಉರುಳು ಸೇವೆ ಸಲ್ಲಿಸಬೇಕು" ಎಂದು ತಾಯಿ ಮಗನಿಗೆ ಹೇಳಿದರು. ಸ್ವಾಮೀಜಿಯವರು ತುಟಿಪಿಟಿ ಕ್ಕೆನ್ನದೆ ಉರುಳುಸೇವೆಯನ್ನು ಮಾಡಿದಾಗ ಅವರ ತಾಯಿಯ ಸಂತೋಷ, ಸಂತೃಪ್ತಿಗೆ ಎಣೆ ಇರಲಿಲ್ಲ.**

ಸ್ಥಳದಾನ: ಶ್ರೀ ಆರ್. ಎಸ್. ಶ್ರೀಕಾಂತ, ವಾರಾಣಸಿ